## ಇಲ್ಲಿಯವರೆಗೆ



ಮಳೆಯಿಂದ ತೊಂದರೆಗೊಳಗಾದ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವ ಕೆಲಸ ನಡೆಯುತ್ತದೆ. ನೊಂದ ಮಂದಿಯೆಲ್ಲ ಶಾಲೆಯಲ್ಲಿ ಆಸರೆ ಪಡೆಯಲು ಮುಂದಾಗುತ್ತಾರೆ. ಅಲ್ಲಿಯೇ ಗಂಜಿಕೇಂದ್ರ ತೆರೆಯಲಾಗುತ್ತದೆ. ಅಬ್ದುಲ್ಲನ ತಂಡ ಉಪಚಾರದ ನಿಟ್ಟಿನಲ್ಲಿ ಒಳ್ಳೆಯ ಕೆಲಸ ಮಾಡುತ್ತದೆ. ಎನ್‌ಜಿಓ, ಮೀಡಿಯ ಎಲ್ಲವೂ ಒಟ್ಟಾಗಿ ಕೈಜೋಡಿಸಿ ಪರಿಹಾರ ಕಾರ್ಯದಲ್ಲಿ ನಿರತರಾಗುತ್ತಾರೆ. ಬಟ್ಟೆಬರೆ, ದವಸ ಧಾನ್ಯ, ಪಾತ್ರೆ ಪಗಡಿ ಎಲ್ಲವೂ ಪೂರೈಕೆಯಾಗುತ್ತದೆ. ಆದರೂ ಫರ್ಜಾನಾ ಮತ್ತು ಗಂಗಮ್ಮ ಏನೋ ತಮ್ಮಲ್ಲೇ ಮಾತಾಡಿಕೊಳ್ಳುತ್ತಾರೆ. ಏನೆಂದು ವಿಚಾರಿಸಲಾಗಿ ಊರ ಹೆಣ್ಣುಮಕ್ಕಳು ಮುಟ್ಟಾಗಿದ್ದಾಗ ಬಳಸಲು ಬಟ್ಟೆಯಿಲ್ಲದೆ ಒದ್ದಾಡಿದ ವಿಷಯ ಕೇಳಿ ಎಲ್ಲರಿಗೂ ಸಂಕಟವಾಗುತ್ತದೆ. ಇತ್ತಕಡೆ ಹಾನಿಗೊಳಗಾದ ನದಿಜಾವೂರು ಎಂಬ ಇನ್ನೊಂದು ಪ್ರದೇಶದಲ್ಲಿ ಊರು ತಲುಪಲು ರಸ್ತೆಯಿಲ್ಲದೆ ಜನ ಹರಸಾಹಸ ಪಡುತ್ತಾರೆ. ಇಲ್ಲಿ ಯಾವುದೇ ಪರಿಹಾರ ಸಿಗದ ಕಾರಣ ಬಿಸ್ಲೂರಿನ ಮಂದಿಯೆಲ್ಲ ಸೇರಿ ಶಾಸಕರ ವಿರುದ್ಧ ಪ್ರತಿಭಟನೆ ಮಾಡುವುದಲ್ಲದೆ ತಹಸೀಲ್ದಾರ್ ಮೇಲೆ ಹಲ್ಲೆಯನ್ನೂ ನಡೆಸಲು ಮುಂದಾಗುತ್ತಾರೆ.

ಮಳೆಯಿಂದಾಗಿ ಹದಿನೇಳು ಸಾವಿರ ಕೋಟಿ ರೂಪಾಯಿಯಷ್ಟು ಹಾನಿಯಾಗಿರುವುದನ್ನು ಅಂದಾಜು ಮಾಡುತ್ತಾರೆ. ನಷ್ಟತುಂಬಲು ಮಿಂಚೇರಿ ಮಠದ ಸ್ವಾಮಿಗಳು ಸಂತ್ರಸ್ತರಿಗೆ 5000 ಮನೆಕಟ್ಟಿಸಿಕೊಡುವುದಾಗಿ ಭರವಸೆ ನೀಡುತ್ತಾರೆ. ಈ ಮಧ್ಯೆ ಶಾಲೆಯ ಅಂಗಳದಲ್ಲಿ ಲಾರಿಗಟ್ಟಲೆ ಪರಿಹಾರ ಸಾಮಗ್ರಿಗಳನ್ನುತಂದು ವಿತರಣೆಗೆ ಮುಂದಾಗುತ್ತಾರೆ.

ಬರೆಹವೇ ಕಾಣಿಸುವಂತೆ ಪೇಪರೊಂದನ್ನು ತೆಗೆದು ಅವರಿಬ್ಬರ ಮುಂದೆ ಹರವಿದರು.

'ಅರೆ ವ್ಹಾ. ಹೌದಲ್ಲ ಸರ್. ಸೂಪರ್' ಎನ್ನುತ್ತ ಪುನಃ ಪೇಪರ್ ಮಡಚಿದ ಶೇಖ್ ಸಾಬರು ತಮ್ಮ ಮಾತುಗಳನ್ನು ಮುಂದುವರಿಸಿ 'ಸರ್ ನೀವ್ಹೇಳಿದಂಗ ಡೀಸಿ ಸಾಹೇಬ್ರನ್ನೂ ಹಾಕ್ಕೆಳಮು. ಆದ್ರೆ ಅವರನ್ನ ಕರೆಸೋ ಜವಾಬ್ದಾರಿ ಮಾತ್ರ ನಿಮ್ದು. ಅವ್ರೂ ಇರ್ಲಿ, ನೀವೂ ಇರ್ರಿ. ನೀವು ಒಂದು ಪಂಜಿಗೆ ಸಾಂಕೇತಿಕವಾಗಿ ಬೆಂಕಿ ಹತ್ತಿಸಿ ಮೆರವಣಿಗೆ ಉದ್ಘಾಟನೆ ಮಾಡ್ರಿ, ಅವು ಎಲ್ಲ ಪಂಜುಗಳು ಹತ್ತಿಕೊಂಡಾದ ಮ್ಯಾಲೆ ಮೆರವಣಿಗೆಗೆ ಹಸಿರು ನಿಶಾನೆ ತೋರ್ಸಿ ಚಾಲನೆ ನೀಡ್ಲಿ' ಎಂದರು. ಅನುಕೂಲಕರ ಹುದ್ದೆಗಳನ್ನು ಅಲ್ಲಿಂದಲ್ಲೇ ಸೃಷ್ಟಿಸಿ ಮ್ಯಾನೇಜ್ ಮಾಡುವ ಸಾಬರ ಕಲೆಯನ್ನು ಮೆಚ್ಚಿ ಒಳಗೊಳಗೆ ತಲೆದೂಗಿದರು ಮಲ್ಲಪ್ಪನವರು.

'ಹೆಂಗೂ ಆದೀತು ಬಿಡ್ರಿ. ಅದೇನು ಇಂಪಾರ್ಟೆಂಟ್ ಅಲ್ಲ ಇಲ್ಲಿ. ಸೋಶಿಯಲ್ ಕಮಿಟ್‌ಮೆಂಟ್ ಇಂಪಾರ್ಟೆಂಟ್ ಇಲ್ಲಿ' ಎಂದು ಮತ್ತಿಷ್ಟು ಅಗಲವಾದರು ಸಂಪಾದಕರು.

'ಸರ್, ಇದನ್ನ ನಾವು ಜಿಲ್ಲಾ ಬರಹಗಾರರ ಬಳಗದ ಕಡೆಲಿಂದ ಮಾಡಾಕತ್ತೀವಿ. ಆಲೋಚನೆ ಅಂತೂ ಹಿಂಗೈತೆ. ಆದ್ರೂ ಏನೇನ್ ಮಾಡ್ಬಹುದು, ಏನೇನಿದ್ರೆ ಚೆಂದ ಅಂತ ತಾವೂ ಒಂದಿಷ್ಟು ಸಲಹೆ ಕೊಟ್ರೆ ಅದರ ಪ್ರಕಾರ ಮಾಡಕ ಬರುತ್ತ' ಬಂದಾಗಿನಿಂದ ಮಾತೇ ಆಡಿರದ ಮಲ್ಲಪ್ಪನವರು ಸಂಪಾದಕರ ಸಕಾರಾತ್ಮಕ ಸ್ಪಂದನೆಯಿಂದ ಉತ್ತೇಜಿತರಾಗಿ, ಅವರನ್ನು ತಮ್ಮದೇ ಶೈಲಿಯಲ್ಲಿ ಮತ್ತಷ್ಟು ಪಂಪ್ ಮಾಡುತ್ತ ತಮಗಾಗಿ ಒಂದು ಮಾತಿನ ಅವಕಾಶವನ್ನು ಸೃಷ್ಟಿಸಿ, ಬಳಸಿಕೊಂಡು ಬಾಯಿಸಮಾಧಾನ ಮಾಡಿಕೊಂಡರು. ಈ ಮಾತಿನಿಂದ ಇನ್ನಷ್ಟು ಉತ್ತೇಜಿತರಾದ ವಿಕೆ

'ನೀವು ಹೆಂಗ ಪ್ಲ್ಯಾನ್ ಮಾಡಿರೋ ಗೊತ್ತಿಲ್ಲ, ಆದ್ರೆ ಪಂಜಿನ ಮೆರವಣಿಗೆ ಮಾತ್ರ ಕನ್ನಡ ಸಂಘದಿಂದ ಅಂಬೇಡ್ಕರ್ ಚೌಕ್‌ವರೆಗೆ ಮಾಡ್ರಿ. ಅಷ್ಟು ದೂರ ಇದ್ರೆ ಹೆಚ್ಚು ಜನರ ಅಟೆನ್ಷನ್ ಗ್ರ್ಯಾಬ್ ಮಾಡಕ ಈಜಿ ಆಗ್ತದ. ಆಮೇಲೆ ವರ್ತಕರ ಸಂಘ, ಆಟೋ ಚಾಲಕರ ಸಂಘದಿಂದ ಹಿಡ್ಕಂಡು ಎಲ್ಲ ಸಂಘ ಸಂಸ್ಥೆಗಳವರಿಗೂ ಇನ್‌ವೈಟ್ ಮಾಡ್ರಿ. ಸಂಘದ ರೆಪ್ಯುಟೇಷನ್ ಮತ್ತೆ ಸೋಶಿಯಲ್ ಐಡೆಂಟಿಟಿ ಪ್ರಶ್ನೆ ಇದು, ಏನೇ ಡಿಫರೆನ್ಸ್ ಇದ್ರೂನೂ ಎಲ್ಲರೂ ಬರೇಬೇಕಾಗ್ತದ. ಕೊನೆಗೆ ಅಂಬೇಡ್ಕರ್ ಚೌಕ್ ತಲುಪಿದಾಗ ಶೇಖ್ ಸಾಹೇಬರು ಈ ಮಳೆದುರಂತದ ಬಗ್ಗೆ ನಾಲ್ಕು ಮಾತಾಡ್ಲಿ, ನೀವು ಅದರ ಬಗ್ಗೇನೇ ಬರದಿರ ಕವನ ಐತೆಲ್ಲ, ಅದುನ್ನ ಓದ್ರಿ' ಎಂದು ತಮ್ಮ ಸಲಹೆಯ ಪರಿಣಾಮವನ್ನು ಪರೀಕ್ಷಿಸಲು ಎದುರಿದ್ದ ಇಬ್ಬರ ಮುಖಗಳನ್ನು ನೋಡಿದರು. ಏನು ಮಾತಾಡಿದರೂ ನಾಟಕೀಯವಾಗಬಹುದಾದ ಸಾಧ್ಯತೆಯಿರುವ ಮಟ್ಟಕ್ಕೆ ಅವರಿಬ್ಬರು ಆನಂದತುಂದಿಲರಾಗಿದ್ದುದು ಕಂಡು ವಿಕೆಯವರು ಮನದಲ್ಲೇ ತಮ್ಮ ಬೆನ್ನು ಚಪ್ಪರಿಸಿಕೊಂಡರು. ಜಾಹಿರಾತಿಗಾಗಿ ಯಾವಾಗ ವಿಶೇಷಾಂಕ ಮಾಡಿದರೂ, ತುಂಬುಗಗಳಂತೆ ಬಳಸಿಕೊಳ್ಳಲು ತಮ್ಮ ಬರೆಹಗಳನ್ನು ಯಾವುದೇ ಸಂಭಾವನೆ ನಿರೀಕ್ಷಿಸದೆ ಕೊಡುತ್ತ ಬಂದುದು ಹೀಗೆ ಹೇಗೆಲ್ಲ ಉಪಯೋಗಕ್ಕೆ ಬಂತು ಎಂದು ಮಲ್ಲಪ್ಪ ಸಮಾಧಾನ ಭಾವ ತಳೆದರು. ಆದರೆ ಶೇಖ್ ಸಾಹೇಬರು ಮಾತ್ರ ಅನ್ನಲೋ ಬೇಡವೋ ಎಂಬಂತೆ

'ಸರ್ ಜನ ಈ ಮಳೆಲಿಂದ ಅನುಭವಿಸಿದ ಕಷ್ಟಗಳ ಬಗ್ಗೆ ನೀವೇಳಿದಂಗ ಮಾತಾಡಮು. ಅದು ಬಹಳ ಮುಖ್ಯ ಆ ಮಾತು ಬೇರೆ. ಆದರೆ ನಮ್ಮ ಅಗ್ದಿ ಪರಿಚಯದ ಹುಡುಗ ಒಬ್ಬನು ರವಿ ಅಂತ ಪೊಲೀಸ್ ಐದಾನ, ಅವನೊಂದು ಮಾತು ಹೇಳಿದ ಈ ಮಳೆ ಬಂದು ಮಂದಿ ಸೋಮಾರಿಗುಳಾಗ್ಯಾರ ಅಂತ. ಡೋನರ್ಸ್ ಕೊಟ್ಟಿರ ರೇಷನ್ನಿಂದ ಅಡಿಗೆ ಗೂಡ ಮಾಡಿಕೆಳದಿಲ್ಲಂತ. ಇನ್ನೊಂದು ತಾಸು ನೋಡಮು ತಡೆಪ ಯಾರನ್ನ ಪುಣ್ಯಾತ್ಮರು ಚಿತ್ರಾನ್ನ ಪತ್ರಾನ್ನ ತರ್ತಾರೇನು ಅಂತಾರಂತ' ಎಂದು ಸಂಪಾದಕರ ಪ್ರತಿಕ್ರಿಯೆ ನೋಡಿ ಮುಂದುವರೆಯುವ ನಿರ್ಧಾರದಲ್ಲಿ ಅವರ ಮುಖವನ್ನು ನೋಡಿದರು. ತಮ್ಮ ಬಂದೂಕನ್ನು ಮಂದಿ ಕೈಯಲ್ಲಿಟ್ಟು ಚಲಾಯಿಸುವುದರಲ್ಲಿ ಅವರು ನಿಸ್ಸೀಮರು. ಸತ್ತರೆ ಗುರಿಕಾರನ ಖ್ಯಾತಿ; ಬದುಕಿದರೆ ಬಂದೂಕಷ್ಟೇ ತಮ್ಮದು, ಚಲಾಯಿಸಿದವರು ಬೇರೊಬ್ಬರು ಎಂಬ ನೀತಿ.

'ಆದ್ರೆ ಬಹಿರಂಗದಲ್ಲಿ ಬ್ಯಾರೆ ಮಾತೇ ಹೇಳಬೇಕಾಗ್ತದ ನೀವು. ಯಾಕಂದ್ರೆ ಇದು ಪಬ್ಲಿಕ್ ಸೆಕ್ಟರ್ರೊಳಗಿರ ನಮ್‌ನಿಮ್ಮಂತವರ ಸೋಶಿಯಲ್ ಫ್ಯಾಕ್ಟರ್ ಮ್ಯಾಲೆ ಅಡ್ವರ್ಸ್ ಎಫೆಕ್ಟ್ ಮಾಡ್ತದ' ಎಂದು ತಮ್ಮ ಸಮ್ಮತಿ ಮತ್ತು ಸೂಚನೆಗಳನ್ನು ಒಂದೇ ವಾಕ್ಯದಲ್ಲಿ ಸೂಕ್ಷ್ಮವಾಗಿ ತಿಳಿಸಿ, ಏನನ್ನೋ ಗಹನವಾಗಿ ಆಲೋಚಿಸಿ–

'ಅದಕ್ಕೇ ನಾವು ಈ ಜನರ ಕಷ್ಟಗಳಿಗಿಂತ, ಅದುನ್ನ ಪರಿಹರಿಸಾಕೆ ಇನ್‌ಚಾರ್ಜ್ ಮಿನಿಸ್ಟರ್, ಡೀಸಿ ಅಷ್ಟ್ಯಾಕ ಒಬ್ಬ ಪೀಸಿ ಗೂಡ ಏನು ಕೆಲಸ ಮಾಡಿದ್ದಾರ ಅನ್ನೋದನ್ನೇ ಹೈಲೈಟ್ ಮಾಡಿಕಂತ ಬಂದೀವಿ. ಇವತ್ತಿಂದು ನಮ್ ಪೇಪರ್ ನೋಡ್ರಿ ಆಮ್ಯಾಲೆ ಡೀಟೇಲ್ ಆಗಿ. ನೀರಿನ್ಯಾಗ ಮುಣಿಗಿ ಸಾಯ್ತಿರ ಒಂದು ಹುಡುಗೀದು ಜೀವ ಕಾಪಾಡ್ಯಾನ ಆ ಪೀಸಿ ರವಿ. ಅವನ ಬಗ್ಗೆ ಒಂದು ಸ್ಪೆಷಲ್ ಸ್ಟೋರಿ